**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ದೀಪಾಂಜಲಿನಗರ, ವಾರ್ಡ್ ಸಂಖ್ಯೆ-158, ಪಾಲಿಕೆ ಸದಸ್ಯರ ಕಛೇರಿ, 8ನೇ ಮುಖ್ಯರಸ್ತೆ, ಆವಲಹಳ್ಳಿ ಬಿಡಿಎ ಬಡಾವಣೆ, (ಅಭಯ ಆಂಜನೇಯ ದೇವಸ್ಥಾನ ಹತ್ತಿರ) ಬೆಂಗಳೂರು-560 026

ಸಂಖ್ಯೆ: ಸ.ಕಾ.ನಿ.ಅ/ಗಾಆ/ಪಿಆರ್/ /22-23

ದಿನಾಂಕ:-10-08-2022

ವಾರ್ಡ್ ಸಂಖ್ಯೆ : 158 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀಮತಿ. ಚೈತ್ರ .ಜಿ.ಎಸ್. | ಸ.ಅಭಿಯಂತರರು | ಹಾಜರಾಗಿರುತ್ತಾರೆ |
| 2 | ಶ್ರೀ. ಹೆಚ್. ಮಂಜುನಾಥ್ | ಕಿ.ಆ. ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 3 | ಶ್ರೀ.ಹೇಮಂತ್ | ಹಿ.ಆ. ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 4 | ಶ್ರೀ. ಎಸ್. ಮಂಜುನಾಥ್.ಎಸ್. | ಸ್ಟ್ರೀಟ್ ಲೈಟ್ | |
| 5 | ಶ್ರೀಮತಿ. ಸುಮಿತ್ರ .ಕೆ.ಎಸ್. | ಬೆಸ್ಕಾಂ ಡಬ್ಯೂ6 (ಕಿ.ಅ) | ಹಾಜರಾಗಿರುತ್ತಾರೆ |

**ಸಭೆಗೆ ಹಾಜರಿದ್ದ ಸಾರ್ವಜನಿಕರು**

1. ಶ್ರೀಮತಿ. ಗಿರಿಜಮ್ಮ
2. ಶ್ರೀ. ಸೋಮಶೇಖರ್
3. ಶ್ರೀ. ಸಂತೋಷ್ ಕುಮಾರ್ .ಡಿ.
4. ಶ್ರೀಮತಿ. ರಾಜಮ್ಮ
5. ಶ್ರೀ. ಮಂಜುನಾಥ್ .ಎಸ್.
6. ಶ್ರೀ. ಮಂಜುನಾಥ್
7. ಶ್ರೀ. ಆರ್. ನಂಜುಂಡ
8. ಶ್ರೀ. ಸೋಮಣ್ಣ

ಸಮಿತಿಯ ಕಾರ್ಯದರ್ಶಿಯವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸದಸ್ಯರುಗಳಿಗೆ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತ ಕೋರಿದ ನಂತರ ಸಭೆಯನ್ನು ಆರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

ಅಭಯ ಆಂಜನೇಯ ದೇವಸ್ಥಾನ ರಸ್ತೆ ವಿನೋಭ ಕಾಲೋನಿಯಲ್ಲಿ ಮರ ಬಾಗಿದ್ದು, ರೆಂಬೆಗಳನ್ನು ಕತ್ತರಿಸುವಂತೆ ಶ್ರೀಮತಿ. ಗಿರಿಜಮ್ಮ ರವರು ಕೋರಿದರು.

**ಕ್ರಮ : ಅರಣ್ಯ ಇಲಾಖೆ**

ಅಭಯ ಆಂಜನೇಯ ದೇವಸ್ಥಾನ ರಸ್ತೆಯಲ್ಲಿ ವಿದ್ಯುತ್ ಕಂಬ ವಾಲಿಕೊಂಡಿದ್ದು ಅದನ್ನು ಬದಲಾಯಿಸುವಂತೆ ಸದಸ್ಯರಾದ ಶ್ರೀಮತಿ.ಗಿರಿಜಮ್ಮ ತಿಳಿಸಿದರು.

**ಕ್ರಮ : ಬೆಸ್ಕಾಂ ಇಲಾಖೆ**

8ನೇ ಅಡ್ಡರಸ್ತೆ ದೀಪಾಂಜಲಿನಗರದಲ್ಲಿ ನೀರಿನ ಸಮಸ್ಯೆ ಇದ್ದು ಒಂದು ಬೋರ್‌ವೆಲ್ ಕೊರೆಸುವಂತೆ ಶ್ರೀ.ಸೋಮಣ್ಣ ರವರು ಕೋರಿದರು.

**ಕ್ರಮ : ಕಾಮಗಾರಿ ಇಲಾಖೆ**

ದೀಪಾಂಜಲಿನಗರದ ಉದ್ಯಾನವನದಲ್ಲಿ ಜಿಮ್ ಸಲಕರಣೆಗಳನ್ನು ಅಳವಡಿಸಿದ್ದು ಸಾರ್ವಜನಿಕರು ಹೆಚ್ಚಾಗಿ ಬರುವುದರಿಂದ ವ್ಯಾಯಾಮ ಮಾಡಲು ಹೆಚ್ಚಿನ ಸಲಕರಣೆಗಳನ್ನು ಅಳವಡಿಸುವಂತೆ ಶ್ರೀ.ಸೋಮಣ್ಣ ರವರು ಕೋರಿದರು.

**ಕ್ರಮ : ಕಾಮಗಾರಿ ಇಲಾಖೆ**

15ನೇ ಅಡ್ಡರಸ್ತೆ ಈರಣ್ಣಗುಡ್ಡೆಯಲ್ಲಿ ಬೀದಿ ದೀಪದ ಸಮಸ್ಯೆ ಇದ್ದು ಬೀದಿ ದೀಪಗಳನ್ನು ಅಳವಡಿಸುವಂತೆ ಶ್ರೀಮತಿ. ರಾಜಮ್ಮ ರವರು ತಿಳಿಸಿದರು.

**ಕ್ರಮ : ಬೀದಿ ದೀಪ ಇಲಾಖೆ**

3ನೇ ಅಡ್ಡರಸ್ತೆ ಮತ್ತು 2ನೇ ಅಡ್ಡರಸ್ತೆ ಈರಣ್ಣಗುಡ್ಡೆಯಲ್ಲಿ ಮ್ಯಾನ್‌ಹೋಲ್ ಸರಿಪಡಿಸುವಂತೆ ಹಾಗೂ 8ನೇ ಮುಖ್ಯರಸ್ತೆಯಲ್ಲಿ ಚೇಂಬರ್ ಕುಸಿದಿದ್ದುಅದನ್ನು ಸರಿಪಡಿಸುವಂತೆ ಸಹ ತಿಳಿಸಿರುತ್ತಾರೆ.

**ಕ್ರಮ : ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆ**

4ನೇ ಅಡ್ಡರಸ್ತೆ ಇಂದ 8ನೇ ಅಡ್ಡರಸ್ತೆಯ ವರೆಗೆ ಸಾಯಂಕಾಲ 5 ಗಂಟೆ ಇಂದ ಬೆಳಗಿನ ಜಾವ 5 ಗಂಟೆಯವರೆಗೆ ನೀರನ್ನು ಬಿಡುವಂತೆ ಶ್ರೀಮತಿ. ರಾಜಮ್ಮ ರವರು ಕೋರಿದರು.

**ಕ್ರಮ : ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆ**

ಈರಣ್ಣಗುಡ್ಡೆ ಸ್ಮಶಾನದ ಹತ್ತಿರ ಕಾಂಪೌಂಡಿನಲ್ಲಿ ಲೈಟ್ ಅವಶ್ಯಕತೆ ಇದ್ದು ಅದನ್ನು ಬಿಬಿಎಂಪಿ ಬೆಸ್ಕಾಂ ಕಛೇರಿಗೆ ಪತ್ರ ಮುಖಾಂತರ ತಿಳಿಸಿ ಹೊಸ ಲೈಟ್ ಅಳವಡಿಸುವಂತೆ ಶ್ರೀ. ನಂಜುಂಡ ರವರು ತಿಳಿಸಿದರು.

**ಕ್ರಮ : ಕಾಮಗಾರಿ ಇಲಾಖೆ**

ಡಾ॥ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಯಾವುದೇ ಚಟುವಟಿಕೆಗಳು ನಡೆಸದಂತೆ ಶ್ರೀ. ನಂಜುಡ ರವರು ಕೋರಿರುತ್ತಾರೆ.

**ಕ್ರಮ : ಕಾಮಗಾರಿ ಇಲಾಖೆ**

ಈರಣ್ಣಗುಡ್ಡೆ ಸ್ಮಾಶನದ ಒಳಗಡೆ ನೀರಿನ ಅವಶ್ಯಕತೆ ಇದ್ದು, ನೀರನ ಸೌಲಭ್ಯವನ್ನು ಕಲ್ಪಿಸಿಕೊಡುವಂತೆ ಶ್ರೀ. ನಂಜುಂಡ ರವರು ತಿಳಿಸಿದರು.

ಕ್ರಮ : ಕಾಮಗಾರಿ ಇಲಾಖೆ

6ನೇ ಅಡ್ಡರಸ್ತೆ, ವಿನೋಭ ಕಾಲೋನಿಯಲ್ಲಿ ಅಶ್ವತ್ಥ್ ಕಟ್ಟೆ ಇದ್ದು ಅದನ್ನು ದುಸ್ಥಿಗೊಳಿಸುವಂತೆ ಶ್ರೀ. ನಂಜುಂಡ ರವರು ಕೋರಿದರು.

ಕ್ರಮ : ಕಾಮಗಾರಿ ಇಲಾಖೆ

4ನೇ ಅಡ್ಡರಸ್ತೆ, ವಿನೋಭ ಕಾಲೋನಿಯಲ್ಲಿ ನೀರಿನ ಪೈಪ್‌ಗಳನ್ನು ಹಾಕಿಸುವಂತೆ ಶ್ರೀ. ನಂಜುಂಡ ರವರು ಕೋರಿದರು.

ಕ್ರಮ : ಕಾಮಗಾರಿ ಇಲಾಖೆ

ಈರಣ್ಣಗುಡ್ಡೆ (ವೀರಭದ್ರ ಸ್ವಾಮಿ ಬಡಾವಣೆ) ಕಲ್ಲು ಬಂಡೆಗಳು ಬಿದ್ದಿದ್ದು ಅದನ್ನು ತೆಗೆಸಿಕೊಡುವಂತೆ ಹಗೂ ರಿಟನಿಂಗ್ ವಾಲ್ ಹಾಕಿಸುವಂತೆ ಶ್ರೀಮತಿ. ರಾಜಮ್ಮ ರವರು ಕೋರಿರುತ್ತಾರೆ.

ಕ್ರಮ : ಕಾಮಗಾರಿ ಇಲಾಖೆ

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀಮತಿ. ಚೈತ್ರ .ಜಿ.ಎಸ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

ಕಾರ್ಯದರ್ಶಿ

ವಾರ್ಡ್ ಸಂಖ್ಯೆ : 158 (ದೀಪಾಂಜಲಿನಗರ)

<u>ಪ್ರತಿಯನ್ನು:-</u>

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.